Regd. No. 4277 RBI Lic No. UBD/1464P Mail id. bub.rrnr@gmail.com ☎:08373 – 266627

# ಶ್ರೀ ಬಸವೇಶ್ವರ ಅರ್ಬನ್ ಕೋ-ಅಪ್ ಬ್ಯಾಂಕ ಲಿ,.

ರಾಣೆಬೆನ್ನೂರ 581 115 ಜಿಲ್ಲೆ: ಹಾವೇರಿ

---

## -: 95 ನೇ ವಾರ್ಷಿಕ ಸರ್ವಸಾಧಾರಣ ಸಭೆಯ ನೋಟೀಸು :-

ನಮ್ಮ ಬ್ಯಾಂಕಿನ ಸನ್ 2018-19ನೇ ಸಾಲಿನ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ದಿನಾಂಕ: 22/09/2019ನೇ ರವಿವಾರ ಮುಂಜಾನೆ 11-00 ಘಂಟೆಗೆ ಬ್ಯಾಂಕಿನ "ವಜ್ರಮಹೋತ್ಸವ" ಹಾಲಿನಲ್ಲಿ ಕೆಳಗೆ ಕಾಣಿಸಿದ ವಿಷಯಗಳನ್ನು ಚರ್ಚಿಸುವುದರ ಸಲುವಾಗಿ ನಮ್ಮ ಬ್ಯಾಂಕಿನ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸರ್ವ ಸದಸ್ಯರ ಸಭೆಯನ್ನು ಕರೆಯಲಾಗಿದೆ. ಕಾರಣ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಯು

## -: ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು :-

ಪ್ರಾರ್ಥನೆ, . ಸ್ವಾಗತ

1. ಸಭೆಯ ನೋಟೀಸು ಓದಿ ದಾಖಲಿಸುವುದು

2. ಹಿಂದಿನ ಸಾಮಾನ್ಯ ಸಭೆಯ ನಡುವಳಿಕೆಗಳನ್ನು ಓದುವುದು ಮತ್ತು ಧೃಡೀಕರಿಸುವುದು

3. ಮಂಡಳಿಯು ಮಂಡಿಸಿದ ಹಿಂದಿನ ವರ್ಷದ ವಾರ್ಷಿಕ ವರದಿಯ ಪರಿಗಣನೆ

4. ಹಿಂದಿನ ವರ್ಷದ ಲೆಕ್ಕ ಪರಿಶೋಧನಾ ವರದಿ, ಲೆಕ್ಕಪರಿಶೋಧಿತ ಆಸ್ತಿಹೊಣೆ ಪಟ್ಟಿ ಲಾಭ ನಷ್ಟ ತಖ್ತೆ ಮತ್ತು ಇತರ ಆರ್ಥಿಕ ತಖ್ತೆಗಳ ಪರಿಗಣನೆ ಹಾಗೂ ಅದರ ಬಗ್ಗೆ ಮಂಡಳಿಯು ತೆಗೆದುಕೊಂಡ ಕ್ರಮಗಳ ಪರಿಗಣನೆ.

5. ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ ಸಲ್ಲಿಸುವುದು.

6. ಮಂಡಳಿಯು ರೂಪಿಸಿದ ಬ್ಯಾಂಕಿನ ಮುಂಬರುವ ವರ್ಷದ ಕ್ರಿಯಾಯೋಜನೆ ಪರಿಗಣನೆ.

7. ಹಿಂದಿನ ವರ್ಷದ ಆಯವ್ಯಯದ ಅನುದಾನದಲ್ಲಿನ ಹೆಚ್ಚುವರಿ ಖರ್ಚುಗಳಿದ್ದಲ್ಲಿ, ಅಂಥ ಖರ್ಚುಗಳ ಅನುಮೋದನೆ, ಮತ್ತು ಮುಂದಿನ ವರ್ಷದ ಆಯವ್ಯಯ ಅಂದಾಜುಗಳ ಅನುಮೋದನೆ.

8. ನಿಯಮಾನುಸಾರ ಲಾಭದ ವಿನಿಯೋಗ ಮತ್ತು ಲಾಭಾಂಶ ಪ್ರಮಾಣದ ಅನುಮೋದನೆ.

9. ವಸೂಲಾಗದ್ದೆಂದು ಪರಿಗಣಿಸಲಾದಂಥ ಯೋಗ್ಯ ಪ್ರಕರಣಗಳಲ್ಲಿ ಹೋಕುಬಾಕಿ(ಬ್ಯಾಡ ಡೆಟ್ಸ) ಸಾಲಗಳ ನಿರ್ಧರಿಸುವುದು ಮತ್ತು ಮುಂದಿನ ಕ್ರಮ ಜರುಗಿಸುವುದು.

10. ಲೆಕ್ಕ ಪರಿಶೋಧಕರ ನೇಮಕಾತಿ ಮತ್ತು ಆತನಿಗೆ ಕೊಡಬಹುದಾದ ಸಂಭಾವನೆಯ ನಿರ್ಧರಣೆ.

11. ನಿರ್ದೇಶಕರಿಗೆ ಮತ್ತು ಅವರ ಸಂಭಂದಿಗಳಿಗೆ ನೀಡಲಾದ ಸಾಲಗಳ ಮತ್ತು ಮುಂಗಡಗಳ, ಸುಸ್ತಿಬಾಕಿ ಯಾವುದಾದರೂ ಇದ್ದರೆ ಅವುಗಳ ಮತ್ತು ಅವುಗಳ ವಸೂಲಿಗಾಗಿ ಕೈಗೊಂಡ ಕ್ರಮದ ಪರಿಶೀಲನೆ.

12. ಪೋಟ ನಿಯಮ (ಉಪ ನಿಯಮ) ತಿದ್ದುಪಡಿ ಕುರಿತು ವಿಚಾರ.ಉಪನಿಯಮ ತಿದ್ದುಪಡಿ ಪ್ರತಿಯನ್ನು ಬ್ಯಾಂಕಿನ ಸೂಚನಾ ಫಲಕದಲ್ಲಿ ಮತ್ತು ವಾರ್ಷಿಕ ವರದಿ ಪುಸ್ತಕದಲ್ಲಿ ತಿಳಿಯಪಡಿಸಲಾಗಿದೆ.

13. ಬ್ಯಾಂಕು ತನ್ನ ನಿಧಿಗಳನ್ನು ಕಾಯ್ದೆಯ ಕಲಂ 58 ರ ಪ್ರಕಾರ ತೊಡಗಿಸಲು ಅನುಮತಿ ಕೊಡುವುದು.

14. ಸೂಕ್ತ ಮುನ್ಸೂಚನೆ ಮೇರೆಗೆ ತರಬಹುದಾದ ಇತರೆ ವಿಷಯಗಳು

15. ಸಭಾಪತಿಯವರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

16. ವಂದನಾರ್ಪಣೆ

| | | | |
|---|---|---|---|
| ರಾಣೆಬೆನ್ನೂರ | ಶ್ರೀ ಚನವೀರಪ್ಪ ಆರ್ ಅಸುಂಡಿ | ಶ್ರೀ ಶಿವಕುಮಾರ ಜಿ ನರಸಗೊಂಡರ | ಶ್ರೀ ನಿರಂಜನ.ಎಮ್.ಉದಾಸಿ |
| ದಿನಾಂಕ: 11/07/2019 | ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಭಾರ ವ್ಯವಸ್ಥಾಪಕರು |

**-: ನಿರ್ದೇಶಕರು :-**

1. ಶ್ರೀ ಪರಮೇಶ್ವರಪ್ಪ.ಎಮ್ ಗವಳಿ 2. ಶ್ರೀ ಈಶ್ವರಪ್ಪ ಜಿ, ಹಾವನೂರ 3. ಶ್ರೀ ಶೇಖಪ್ಪ.ಆರ್.ಬಳ್ಳಾರಿ 4. ಶ್ರೀ ಶಂಭುಲಿಂಗಪ್ಪ.ಜಿ.ಕಟಗಿಹಳ್ಳಿ 5. ಶ್ರೀ ವೀರೇಶ.ಸಿ.ಮೋಟಗಿ 6. ಶ್ರೀ ಶಿವಾನಂದ,ಎಸ್,ಸಾಲಗೇರಿ 7. ಶ್ರೀ ಚೋಳಪ್ಪ ಎನ್ ಕಸವಾಳ 8. ಶ್ರೀ ಬಸವರಾಜ,ಸಿ,ತಾವರಗೊಂದಿ 11. ಶ್ರೀಮತಿ ಸುಮಾ ಎಸ್ ತಿಳವಳ್ಳಿ 9. ಶ್ರೀ ಮಂಜುನಾಥ.ಹೆಚ್.ಓಲೇಕಾರ 10. ಶ್ರೀಮತಿ ಸರೋಜಾ.ವಿ ಅಜ್ಜೆವಡಿಮಠ 12. ಶ್ರೀ ರಮೇಶ, ಎಮ್, ಪಟ್ಟಣಶೆಟ್ಟಿ (ವೃತ್ತಿಪರ ನಿರ್ದೇಶಕರು ಕೋ-ಆಪ್) 13. ಶ್ರೀ ಅಚ್ಯುತ ವಿ ಕಟ್ಟಿ (ವೃತ್ತಿಪರ ನಿರ್ದೇಶಕರು ಕೋ-ಆಪ್)

**-: ಸದಸ್ಯರು ಗಮನಿಸಬೇಕಾದ ಸೂಚನೆಗಳು :-**

1. ನೂತನ ಕ.ಸ.ಸಂ ಕಾಯ್ದೆ ಕಲಂ ಪ್ರಕಾರ ಉಪನಿಯಮಗಳಲ್ಲಿ ತಿದ್ದುಪಡಿ ತರಲಾಗಿದೆ. ಅದರ ಪ್ರಕಾರ ಸದಸ್ಯರು ಬ್ಯಾಂಕಿನ ವ್ಯವಹಾರದಲ್ಲಿ ಸಕ್ರೀಯವಾಗಿ ಭಾಗವಹಿಸಬೇಕೆಂಬ ಉದ್ದೇಶದಿಂದ ಸದಸ್ಯರು 5 ವಾರ್ಷಿಕ ಮಹಾಸಭೆಗಳಲ್ಲಿ 3 ವಾರ್ಷಿಕ ಮಹಾಸಭೆಗೆ ಕಡ್ಡಾಯವಾಗಿ ಹಾಜರ ಇರತಕ್ಕದ್ದು.

2. ಬ್ಯಾಂಕಿನ ಯಾವುದೇ ರೀತಿಯ ಖಾತೆ ತೆರೆದು ಕಡ್ಡಾಯವಾಗಿ ವರ್ಷಗಳಲ್ಲಿ ಕನಿಷ್ಟ 3 ವರ್ಷಗಳಲ್ಲಿ ಬ್ಯಾಂಕಿನ ವ್ಯವಹಾರವನ್ನು ಮಾಡತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಸದಸ್ಯತ್ವವನ್ನು ಕಳೆದುಕೊಳ್ಳಬೇಕಾಗುತ್ತದೆ. ಕಾರಣ ಸದಸ್ಯರು ಕೂಡಲೇ ಕಾರ್ಯತತ್ಪರರಾಗಲು ಆಡಳಿತ ಮಂಡಳಿಯ ಪರವಾಗಿ ವಿನಂತಿಸಿಕೊಳ್ಳುತ್ತೇವೆ.

3. ಶಿಕ್ಷಣ ಪ್ರೇಮಿ ಹಾಗೂ ಮಾಜಿ ರಾಷ್ಟ್ರಪತಿ ಶ್ರೀ ಎ ಪಿ ಜೆ ಅಬ್ದುಲ್ ಕಲಾಂರವರು 27.07.2015ರಂದು ನಿಧನ ಹೊಂದಿದ ಸ್ಮರಣಾರ್ಥವಾಗಿ ಬ್ಯಾಂಕಿನ ಸಿಬ್ಬಂದಿಯವರು ತಮ್ಮ ಒಂದು ದಿನದ ಸಂಬಳ ರೂ 12,000/- ಗಳನ್ನು ಠೇವಣಿ ಮಾಡಿ ಅದರಿಂದ ಕಾಲಕಾಲಕ್ಕೆ ಬರುವ ವಾರ್ಷಿಕ ಬಡ್ಡಿಯನ್ನು ದ್ವಿತೀಯ ಪಿಯುಸಿ/12ನೇವರ್ಗದಲ್ಲಿ ಅತ್ಯುನ್ನತ ಅಂಕ ಪಡೆದ ಸಿಬ್ಬಂದಿ/ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನವೆಂದು ನೀಡಲು ನಿರ್ಧರಿಸಿದ್ದು ಇರುತ್ತದೆ. ಅಂಥಹವರು ದಿನಾಂಕ 15.09.2019ರೊಳಗಾಗಿ ವ್ಯವಸ್ಥಾಪಕರಲ್ಲಿ ದಾಖಲಾತಿಯೊಂದಿಗೆ ಹೆಸರು ನೊಂದಾಯಿಸಲು ವಿನಂತಿಸಿದೆ.

**- : ವಿಶೇಷ ಸೂಚನೆ : -**

1. ವಾರ್ಷಿಕ ಮಹಾಸಭೆಗೆ ಆಗಮಿಸುವ ಸದಸ್ಯರು ಈ ಸಭೆಯ ನೋಟೀಸ್/ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು

2. ವಾರ್ಷಿಕ ಸರ್ವಸಾಧಾರಣ ಸಭೆಯಲ್ಲಿ ಪ್ರಶ್ನಾವಳಿ ಕೇಳುವವರು ಇದ್ದರೆ ಸಭೆಯ 5 ದಿನ ಮುಂಚೆ ಕೇಳುವ ಪ್ರಶ್ನೆಯೊಂದಿಗೆ ಅರ್ಜಿ ಸಲ್ಲಿಸತಕ್ಕದ್ದು.

3. ಸಾಲಗಾರರಷ್ಟೇ ಹೊಣೆಗಾರಿಕೆಯು ಸಾಲಗಾರರ ಜಾಮೀನುದಾರರದ್ದು ಇರುತ್ತದೆ. ಕಾರಣ ಸರಿಯಾದ ಸಮಯದಲ್ಲಿ ಸಾಲಗಾರರು ಕಂತು/ಸಾಲ ಬಾಕಿ ಪಾವತಿಸುವಂತೆ ನೋಡಿಕೊಳ್ಳಬೇಕು.

4. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ 90 ದಿನಗಳಿಂದ ಕಂತು ಬಾಕಿ ಇರುವ/ಬಡ್ಡಿ ಬಾಕಿ ಇರುವ/ ಚಲಾವಣೆ ಇಲ್ಲದೇ ಇರುವ ಸಾಲವು ನಿಷ್ಕ್ರೀಯ ಸಾಲದ ಅಡಿ (ಎನ್.ಪಿ,ಎ) ನಿಷ್ಕ್ರೀಯ ಸಾಲವೆಂದು ಪರಿಗಣಿಸಲ್ಪಡುತ್ತದೆ. ನಿಯಮಾನುಸಾರ ಅಂಥ ಸಾಲಗಾರರು/ಜಾಮೀನುದಾರರ ಮೇಲೆ ಕ್ರಮ ತೆಗೆದುಕೋಳ್ಳಬೇಕಾಗುತ್ತದೆ. ಅಂಥ ಸದಸ್ಯರಿಗೆ ವಾರ್ಷಿಕ ಸರ್ವಸಾಧಾರಣ ಸಭೆ ವಿಷಯದಲ್ಲಿ ಚರ್ಚಿಸುವ/ಮತದಾನದ/ಆಡಳಿತ ಮಂಡಳಿ ಚುನಾವಣೆಗೆ ಸ್ಪರ್ಧಿಸುವ /ಮತದಾನದ ಹಕ್ಕು ಇರುವುದಿಲ್ಲ.

5. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ (ಕೆ ವಾಯ್ ಸಿ) ಪ್ರಕಾರ ತಮ್ಮ ಇತ್ತೀಚಿನ ಭಾವಚಿತ್ರ/ಓಟಿಂಗ್ ಕಾರ್ಡ/ಆಧಾರ ಕಾರ್ಡ/ಪಾನ ಕಾರ್ಡ/ಕಡ್ಡಾಯವಾಗಿ ಬ್ಯಾಂಕಿಗೆ ಸಲ್ಲಿಸಿ ತಮ್ಮ ಖಾತೆ ಸ್ಥಿರಗೊಳಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಖಾತೆ ಸ್ಥಗಿತಗೊಳಿಸಲಾಗುವುದು.

6. ಡಿವಿಡೆಂಡ ಹಣಕ್ಕೆ ಕಡ್ಡಾಯವಾಗಿ ಉಳಿತಾಯ ಖಾತೆ ತೆರೆಯಿರಿ. 3 ವರ್ಷಗಳಿಂದ ಪಾವತಿಯಾಗದೇ ಇರುವ ಡಿವಿಡೆಂಡ ಹಣವನ್ನು ಕಡ್ಡಾಯವಾಗಿ ಉಪನಿಯಮಗಳ ಅನುಸಾರ ಕಾಯ್ದಿಟ್ಟ ನಿಧಿಗೆ ವರ್ಗಾಯಿಸಲಾಗುವುದು.

7. ಆದಾಯಕರ ಕಾನೂನು 1961ರ ನಿಯಮಗಳ ಮೇರೆಗೆ ಒಟ್ಟು ಎಲ್ಲ ಠೇವುಗಳಿಂದ ರೂ 40,000 /-ಮತ್ತು ಮೇಲ್ಪಟ್ಟು ಬಡ್ಡಿ ಪಡೆಯುತ್ತಿದ್ದರೆ, ಆದಾಯ ತೆರಿಗೆ ಮೂಲದಲ್ಲಿಯೇ ಕಡಿತ ಮಾಡಲಾಗುವುದು. ಇದರಿಂದ ವಿನಾಯಿತಿ ಪಡೆಯಬೇಕಾದರೆ ಸಾಮಾನ್ಯರು 15ಜಿ ಮತ್ತು ಹಿರಿಯನಾಗಿರಿಕರು 15ಹೆಚ್ ಫಾರ್ಮಗಳನ್ನು ಪಾನಕಾರ್ಡನೊಂದಿಗೆ ಬ್ಯಾಂಕಿಗೆ ಸಲ್ಲಿಸತಕ್ಕದ್ದು.

8. ಆಕ್ಸಿಸ್ ಬ್ಯಾಂಕ ಸಹಭಾಗಿತ್ವದೊಂದಿಗೆ ಎನ್ ಇ ಎಫ್ ಟಿ/ ಆರ್ ಟಿ ಜಿ ಎಸ್ ನೇರ ಹಣ ವರ್ಗಾವಣೆ ವ್ಯವಸ್ಥೆ ಇರುತ್ತದೆ, ಸದಸ್ಯರು ಸದರ ಸೌಲಭ್ಯದ ಉಪಯೋಗ ಮಾಡಿಕೊಳ್ಳಬೇಕಾಗಿ ವಿನಂತಿ.

9. ಭಾರತೀಯ ರಿಝರ್ವ ಬ್ಯಾಂಕ ನಿಯಮಾನುಸಾರ ಕೋರ್ ಬ್ಯಾಂಕಿಂಗ್ ತತ್ರಾಂಶವನ್ನು ಅಳವಡಿಸಿಕೊಳ್ಳಲಾಗಿದೆ.

10. ಬ್ಯಾಂಕಿನ ತ್ವರಿತ ಮಾಹಿತಿಗಾಗಿ ಎಸ್ ಎಮ್ ಎಸ್ ವ್ಯವಸ್ಥೆ ಇರುತ್ತದೆ. ಕಾರಣ ಸದಸ್ಯರು/ಗ್ರಾಹಕರು ತಮ್ಮ ಮೊಬೈಲ್ ಸಂಖ್ಯೆ ಬ್ಯಾಂಕಿಗೆ ಒದಗಿಸಬೇಕಾಗಿ ವಿನಂತಿ.

**"ಕ್ಷಿಪ್ರ ಸೇವೆಗಾಗಿ ಇಂದೇ ಸಂದರ್ಶಿಸಿರಿ" "ನಾನು ಎಲ್ಲರಿಗಾಗಿ ಎಲ್ಲರೂ ನನಗಾಗಿ"**

ಗೆ, ತೆರೆದ ಅಂಚೆ

ಶ್ರೀ/ಶ್ರೀಮತಿ ……………………………………………………………………………………………………

……………………………………………………………………………………………………………

ರಾಣೆಬೆನ್ನೂರ- 581 115